# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-5950/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 21/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಶ್ರೀನಿವಾಸ ತಂದೆ ಶಿವಪ್ಪ ಓಲೇಕಾರ, ಚಿಕ್ಕಸಿಂಧಗಿ ಅಂಚೆ, ಸಿಂಧಗಿ ತಾಲ್ಲೂಕು, ವಿಜಾಪುರ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಶ್ರೀನಿವಾಸ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಸಿಂಧಗಿ ತಾಲ್ಲೂಕಿನ ಚಿಕ್ಕಸಿಂಧಗಿ ಗ್ರಾಮದ ಶ್ರೀಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿಯವರು ಪಡಿತರ ವಿತರಣೆಯಲ್ಲಿ ಪಡಿತರ ಚೀಟಿದಾರರುಗಳಿಗೆ ಸರ್ಕಾರದಿಂದ ನಿಗದಿಪಡಿಸಿದ ಆಹಾರ ಬೆಲೆಗಿಂತ ಹೆಚ್ಚಿನ ಬೆಲೆಗೆ ಆಹಾರ ದಾನ್ಯಗಳನ್ನು ವಿತರಿಸುತ್ತಿರುತ್ತಾರೆಂದು, ಆದ್ದರಿಂದ, ಇದರ ಬಗ್ಗೆ ತಹಶೀಲ್ದಾರ್ ರವರಿಗೆ ದೂರನ್ನು ಸಲ್ಲಿಸಲಾಗಿದ್ದು, ತಹಶೀಲ್ದಾರ್‌ರವರು ಸ್ಥಳಕ್ಕೆ ಆಗಮಿಸಿ ಗ್ರಾಮಸ್ಥರ ಹೇಳಿಕೆಗಳನ್ನು ಮಾಡಿಕೊಂಡಿದ್ದು, ಅದರಲ್ಲಿ ಗ್ರಾಮಸ್ಥರು, ಸದರಿ ನ್ಯಾಯಬೆಲೆ ಅಂಗಡಿಯವರು ಹೆಚ್ಚಿಗೆ ಹಣವನ್ನು ದಾನ್ಯಗಳ ವಿತರಣೆಗೆ ಪಡೆಯುತ್ತಿರುವ ಬಗ್ಗೆ ತಹಶೀಲ್ದಾರ್ ರವರಿಗೆ ಹೇಳಿಕೆ ನೀಡಿರುತ್ತಾರೆಂದು, ಆದ್ದರಿಂದ, ಎದುರುದಾರರು ನ್ಯಾಯಬೆಲೆ ಅಂಗಡಿಯವರ ವಿರುದ್ದ ಕ್ರಮ ಜರುಗಿಸಬೇಕಾಗಿದ್ದು, ಕ್ರಮ ಜರುಗಿಸಿರುವುದಿಲ್ಲ ಹಾಗೂ ಸದರಿ ನ್ಯಾಯಬೆಲೆ ಅಂಗಡಿಯ ಲೈಸನ್ಸ್ ಅನ್ನು ರದ್ದುಗೊಳಿಸಿರುವುದಿಲ್ಲ, ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಿಕ್ಕಸಿಂಧಗಿ ಗ್ರಾಮದ ಶ್ರೀಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿಯ ಬಗ್ಗೆ ದೂರುದಾರರು ಮಾಡಿರುವ ದೂರಿನ ವಿಷಯದಲ್ಲಿ ತಾನು, ಆಹಾರ ನಿರೀಕ್ಷಕರು ಮತ್ತು ಆಹಾರ ಶಿರೇಸ್ತೇದಾರ್ ರವರು ದಿ:13/11/2013 ರಂದು ಚಿಕ್ಕಸಿಂಧಗಿ ಗ್ರಾಮಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಹಲವು ಪಡಿತರಚೀಟಿ

ಹೊಂದಿರುವವರನ್ನು ವಿಚಾರಣೆ ಮಾಡಿದ್ದು, ಆ ಸಮಯದಲ್ಲಿ ಬಹುತೇಕ ಪಡಿತರಚೀಟಿದಾರರು ಸರಿಯಾದ ಅಂದರೆ ಸರ್ಕಾರ ನಿಗದಿಪಡಿಸಿರುವ ದರದಂತೆ ಹಣ ಪಡೆದು ಪಡಿತರ ವಿತರಣೆ ಮಾಡಿರುತ್ತಾರೆ ಹಾಗೂ ಎಂದೂ ತಮ್ಮಿಂದ ಹೆಚ್ಚಿಗೆ ಹಣವನ್ನು ಪಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಚಾರಣೆಯ ಹಿನ್ನೆಲೆಯಲ್ಲಿ ಪ್ರಕರಣದ ದೂರುದಾರರಿಗೆ ದಿ:16/11/2013 ರಂದು ಹಿಂಬರಹವನ್ನು ನೀಡಲಾಗಿರುತ್ತದೆ. ಆದರೂ ಸಹ ನ್ಯಾಯಬೆಲೆ ಅಂಗಡಿಯವರಿಗೆ ಈ ರೀತಿ ಯಾವುದೇ ದೂರು ಬಾರದ ರೀತಿಯಲ್ಲಿ ಹಾಗೂ ಸರ್ಕಾರ ನಿಗದಿಪಡಿಸಿರುವ ದರ ಮತ್ತು ಪ್ರಮಾಣದಲ್ಲಿ ಪಡಿತರವನ್ನು ವಿತರಿಸಬೇಕೆಂದು ಮೌಖಿಕವಾಗಿ ಎಚ್ಚರಿಕೆ ನೀಡಲಾಗಿರುತ್ತದೆ. ಆದ್ದರಿಂದ, ದೂರುದಾರರು ಮಾಡಿರುವ ತನ್ನ ಮೇಲಿನ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದು ತಿಳಿಸಿರುತ್ತಾರೆ. 2 ಮತ್ತು 3ನೇ ಎದುರುದಾರರುಗಳು ಸಹ 1ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಅನುಸರಿಸಿ ಆಕ್ಷೇಪಣೆಯನ್ನು ನೀಡಿರುತ್ತಾರೆ.

3. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ವಿಜಾಪುರದ ಆರಕ್ಷಕ ನಿರೀಕ್ಷಕರು ರವರಿಗೆ ವಹಿಸಲಾಗಿದ್ದು, ಸದರಿಯವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ವರದಿಯಲ್ಲಿ ತಾವು ಪ್ರಕರಣದ ದೂರಿನ ಬಗ್ಗೆ ದಿ:30/09/2014 ರಂದು ಸಿಂಧಗಿ ತಾಲ್ಲೂಕಿನ ಚಿಕ್ಕಸಿಂಧಗಿ ಗ್ರಾಮಕ್ಕೆ ಹಾಗೂ ಬಂದಾಳು ಗ್ರಾಮಕ್ಕೆ ಆಕಸ್ಮಿಕವಾಗಿ ಭೇಟಿ ಕೊಟ್ಟು, ಎರಡು ಗ್ರಾಮಗಳ ನ್ಯಾಯಬೆಲೆ ಅಂಗಡಿಗಳನ್ನು ಪಡಿತರ ವಿತರಣೆ ಬಗ್ಗೆ ವೀಕ್ಷಿಸಿದ್ದು, ಶ್ರೀ ಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿಯ ಸರ್ಕಾರದ ರೇಷನ್ ವಿತರಕರಾದ ಶ್ರೀ ಸಿದ್ದರಾಮಪ್ಪ ಬಗಲಿ ಇವರು ತಾಲ್ಲೂಕಿನ ಮೂರು ಗ್ರಾಮಗಳಲ್ಲಿ ಪಡಿತರ ವಿತರಣೆ ಮಾಡುತ್ತಿರುವುದು ತಿಳಿದು ಬಂದಿರುತ್ತದೆ. ಬಂದಳ್ಳಿ ಗ್ರಾಮ ಹಾಗೂ ಚಿಕ್ಕಸಿಂಧಗಿ ಗ್ರಾಮದ ಸಾರ್ವಜನಿಕ ಪಡಿತರ ಸಾಮಗ್ರಿಗಳ ಸ್ಟಾಕ್ ಪುಸ್ತಕವನ್ನು ಪರಿಶೀಲಿಸಿದ್ದು, ಚಿಕ್ಕಸಿಂಧಗಿ ಗ್ರಾಮದಲ್ಲಿ ಪಡಿತರ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಯಾವುದೇ ರೀತಿಯ ಅಂಗಡಿ ಅಥವಾ ಗೋದಾಮು ಇರುವುದಿಲ್ಲ. ತಾತ್ಕಾಲಿಕ ಪತ್ರಾಸ್ ಅಂಗಡಿ ಇರುತ್ತದೆ. ಸ್ಥಳದಲ್ಲಿ ಚಿಕ್ಕ ಸಿಂಧಗಿ ಗ್ರಾಮದ ಶ್ರೀ ಮೌಲಾ, ಶ್ರೀ ಶ್ರೀಶೈಲ, ಶ್ರೀ ಹೀರಯ್ಯ, ಶ್ರೀ ಶರಣಪ್ಪ, ಶ್ರೀ ಶಂಕರಲಿಂಗ ಚನ್ನಪ್ಪ ಮೇಗಡಿ, ಶ್ರೀ ಹುಚ್ಚಪ್ಪ, ಶ್ರೀ ಷಣ್ಮುಖ, ಶ್ರೀ ಪ್ರಕಾಶ್ ಶರಣಪ್ಪ ತುಪ್ಪದ ಹಾಗೂ ಶ್ರೀ ಸಂಗಣ್ಣ ಗಂಗಪ್ಪ ನೇಗಡಿ ಇವರುಗಳು ಇದ್ದು, ಇವರುಗಳನ್ನು ವಿಚಾರಣೆ ಮಾಡಲಾಗಿ ಚಿಕ್ಕಸಿಂಧಗಿ ಗ್ರಾಮದ ಶ್ರೀ ಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿ ವಿತರಕರಾದ ಶ್ರೀ ಸಿದ್ದರಾಮಪ್ಪ ಬಗಲಿ ಇವರು ನೇರವಾಗಿ ಪಡಿತರವನ್ನು ವಿತರಿಸದೆ, ಅವರ ಸಂಬಂಧಿಯಾದ ಶ್ರೀ ಶಿವಶಂಕರ ತಂದೆ ಬಸಪ್ಪ ಕುದರಗೊಂಡ ಇವರಿಗೆ ವಿತರಣೆ ಮಾಡಲು ವ್ಯವಸ್ಥೆ ಮಾಡಿರುತ್ತಾರೆ. ನ್ಯಾಯಬೆಲೆ ಅಂಗಡಿಯ ಜಾಗ ಶಾಶ್ವತವಿರುವುದಿಲ್ಲ. ಪಡಿತರ ಸಾಮಗ್ರಿಗಳನ್ನು ನ್ಯಾಯಬೆಲೆಯ ಅಂಗಡಿಯ ದರದಲ್ಲಿ ಸರಿಯಾಗಿ

ವಿತರಿಸುತ್ತಿದ್ದಾರೆ. ಶ್ರೀ ಶರಣಪ್ಪ ದೇವಪ್ಪ ತಳವಾರ ಇವರು ಪಡಿತರ ಸಾಮಗ್ರಿಗಳು ಬಂದಾಗ ಊರಲ್ಲಿ ಡಂಗೂರ ಒಡೆದು ಗ್ರಾಮಸ್ಥರಿಗೆ ಮಾಹಿತಿ ನೀಡುತ್ತಿರುವುದಾಗಿ ತಿಳಿಸಿರುತ್ತಾರೆ. ಹೆಚ್ಚಿಗೆ ಹಣವನ್ನು ಕೇಳಿದ ಅಥವಾ ಪಡೆದ ಉದಾಹರಣೆ ಇರುವುದಿಲ್ಲ. ಆದರೂ, ಗ್ರಾಮದ ಸರ್ಕಾರಿ ಪಡಿತರ ವ್ಯವಸ್ಥೆಯನ್ನು ಪಿಕೆಪಿಎಸ್, ಚಿಕ್ಕಸಿಂಧಗಿ ಅಥವಾ ಯಾವುದಾದರೂ ಸಹಕಾರಿ ಸಂಘಗಳಿಗೆ ನೀಡುವುದು ಸೂಕ್ತವೆಂದು ಗ್ರಾಮಸ್ಥರು ಅಭಿಪ್ರಾಯಪಟ್ಟಿರುತ್ತಾರೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸದರಿ ತನಿಖಾಧಿಕಾರಿಯವರ ವರದಿಯ ಆಧಾರದ ಮೇಲೆ ಎದುರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ತನಿಖಾಧಿಕಾರಿಯವರ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಚಿಕ್ಕಸಿಂಧಗಿ ಗ್ರಾಮದಲ್ಲಿ ಶ್ರೀ ಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿ ಮೂಲಕ ಗ್ರಾಮಸ್ಥರಿಗೆ ಪಡಿತರ ವಿತರಣೆಯಾಗುತ್ತಿರುವುದು ಕಂಡು ಬರುತ್ತದೆ. ದೂರುದಾರರ ದೂರಿನ ಆಧಾರದ ಮೇಲೆ ಎದುರುದಾರರುಗಳು ಸ್ಥಳ ಪಂಚನಾಮೆ ಮಾಡಿ ಸಾರ್ವಜನಿಕರಿಂದ ಮಾಹಿತಿಯನ್ನು ಕಲೆ ಹಾಕಿದ್ದು, ಅದರಲ್ಲಿ ಪಡಿತರ ವಿತರಣೆಯಲ್ಲಿ ಶ್ರೀ ಗೊಲ್ಲಾಳೇಶ್ವರ ನ್ಯಾಯ ಬೆಲೆ ಅಂಗಡಿಯವರು ಸರ್ಕಾರ ನಿಗದಿಪಡಿಸಿರುವ ಬೆಲೆಗಿಂತ ಹೆಚ್ಚಿನ ಬೆಲೆಗೆ ಪಡಿತರವನ್ನು ವಿತರಣೆ ಮಾಡುತ್ತಿಲ್ಲವೆಂದು ತಿಳಿಸಿರುವುದು ಸದರಿ ಮಹಜರ್‌ನ ಒಕ್ಕಣಿಯಿಂದ ಕಂಡು ಬರುತ್ತದೆ. ಸದರಿ ಮಹಜರ್ ಅನ್ನು ಹಾಜರುಪಡಿಸಲಾಗಿದೆ. ಸದರಿ ಮಹಜರ್‌ನಲ್ಲಿ ಪಡಿತರ ಚೀಟಿದಾರರುಗಳು ತಮ್ಮ ಪಡಿತರಚೀಟಿ ಹೆಸರನ್ನು ನಮೂದಿಸಿ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಹಾಕಿ ಸರ್ಕಾರದಿಂದ ನಿಗದಿಪಡಿಸಿದ ಬೆಲೆಗೆ ಆಹಾರಧಾನ್ಯಗಳು ವಿತರಣೆಯಾಗುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ಅಭಿಪ್ರಾಯ ನೀಡಿರುತ್ತಾರೆ. ಸುಮಾರು 80 ಪಡಿತರ ಚೀಟಿದಾರರು ಸದರಿ ಮಹಜರ್‌ಗೆ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದು ಕಂಡು ಬರುತ್ತದೆ. ಶ್ರೀಮತಿ ಅನ್ನಪೂರ್ಣ ಬಸಪ್ಪ ಇವರು ತಮ್ಮ ಅಭಿಪ್ರಾಯದಲ್ಲಿ "ಹಿಂದಿನ ತಿಂಗಳು 28 ಕೆ.ಜಿ. ಅಕ್ಕಿಗೆ ರೂ.80.00 ತೆಗೆದುಕೊಂಡಿದ್ದು, ಈ ತಿಂಗಳು ರೂ.45.00 ಪಡೆದಿರುತ್ತಾರೆಂದು ತಿಳಿಸಿರುತ್ತಾರೆ (ಕ್ರ.ಸಂ.43ರಲ್ಲಿ ಅವರ ಹೆಸರು ಇರುತ್ತದೆ). ಅದೇ ರೀತಿ ಶ್ರೀಮತಿ ಕವಿತಾ ಪ್ರಕಾಶ್ ಬಡಿಗೇರ ಇವರು ನಿಗಧಿತ ದರಕ್ಕಿಂತ ರೂ.10.00 ಹೆಚ್ಚಿಗೆ ಪಡೆದಿರುವ ಬಗ್ಗೆ ತಮ್ಮ ಅಭಿಪ್ರಾಯದಲ್ಲಿ ತಿಳಿಸಿರುತ್ತಾರೆ (ಇವರ ಹೆಸರು ಕ್ರ.ಸಂ.16 ರಲ್ಲಿ ಇರುತ್ತದೆ). ಉಳಿದಂತ ಪಡಿತರ ಚೀಟಿದಾರರು ಸರ್ಕಾರದ ನಿಗಧಿತ ದರದಂತೆ ಪಡಿತರವನ್ನು ವಿತರಿಸಿರುವುದಾಗಿ ತಿಳಿಸಿರುತ್ತಾರೆ. ಇದಲ್ಲದೇ ತನಿಖಾಧಿಕಾರಿಯವರು ತಮ್ಮ ಅಭಿಪ್ರಾಯದಲ್ಲಿ ನ್ಯಾಯಬೆಲೆ ಅಂಗಡಿಯ ವಿತರಕರು ತಾಲ್ಲೂಕಿನ ಮೂರು ಗ್ರಾಮಗಳಲ್ಲಿ ಸರ್ಕಾರಿ ಪಡಿತರ ವಿತರಣಾ ಹೊಣೆಯನ್ನು ಹೊಂದಿರುತ್ತಾರೆಂದು ಹಾಗೂ ಏಕಕಾಲಕ್ಕೆ ಮೂರು ಕಡೆ ಪಡಿತರ

ವಿತರಣೆಯನ್ನು ಸಮರ್ಪಕವಾಗಿ ಮಾಡುವುದು ಕಷ್ಟಕರವೆಂದು, ಆದ್ದರಿಂದ, ಪಡಿತರ ವಿತರಣೆಗೆ ಸಂಬಂಧಿಸಿದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಅಥವಾ ಯಾವುದಾದರೂ ಖಾಸಗಿ ಸಹಕಾರ ಸಂಘಕ್ಕೆ ನೀಡಿದ್ದಲ್ಲಿ ಪಡಿತರ ವಿತರಣೆ ಸುಗಮವಾಗಿ ನಡೆಯುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ದೂರುದಾರರು ತಿಳಿಸಿರುವಂತೆ ಪಡಿತರ ಸಾಮಗ್ರಿಗಳಿಗೆ ಸದರಿ ಶ್ರೀಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿಯಲ್ಲಿ ಸರ್ಕಾರ ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ಪಡಿತರವನ್ನು ವಿತರಿಸಿರುವುದು ಕಂಡು ಬಂದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಮೇಲೆ ಹೇಳಿದಂತೆ ಮಹಜರ್ ಕಾಲದಲ್ಲಿ ಇಬ್ಬರು ವ್ಯಕ್ತಿಗಳು ಪಡಿತರ ವಿತರಣೆಯಲ್ಲಿ ಹೆಚ್ಚಿಗೆ ಹಣ ಪಡೆದಿರುವ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ, ಪಡಿತರ ವಿತರಣೆಯಲ್ಲಿ ಮೇಲೆ ತಿಳಿಸಿದ ಕಾರಣಗಳ ಹಿನ್ನೆಲೆಯಲ್ಲಿ ಚಿಕ್ಕ ಸಿಂಧಗಿ ಗ್ರಾಮದಲ್ಲಿ ತೊಂದರೆ ಇರುವುದು ಸ್ಪಷ್ಟ ಪಡುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸಿಂಧಗಿ ತಾಲ್ಲೂಕಿನ, ಚಿಕ್ಕಸಿಂಧಗಿ ಗ್ರಾಮದ ಶ್ರೀ ಗೊಲ್ಲಾಳೇಶ್ವರ ನ್ಯಾಯಬೆಲೆ ಅಂಗಡಿಯ ವಿತರಕರು ತಾಲ್ಲೂಕಿನ ಮೂರು ಗ್ರಾಮಗಳಲ್ಲಿ ಸರ್ಕಾರಿ ಪಡಿತರ ವಿತರಣಾ ಹೊಣೆಯನ್ನು ಹೊಂದಿದ್ದು ಹಾಗೂ ಏಕಕಾಲಕ್ಕೆ ಮೂರು ಕಡೆ ಪಡಿತರ ವಿತರಣೆಯನ್ನು ಸಮರ್ಪಕವಾಗಿ ಮಾಡುವುದು ಕಷ್ಟಕರವಾಗಿರುವುದರಿಂದ, ಪಡಿತರ ವಿತರಣೆಯನ್ನು ತನಿಖಾಧಿಕಾರಿಯವರು ತಿಳಿಸಿರುವಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಅಥವಾ ಮತ್ತಾವುದೇ ಸಹಕಾರಿ ಸಂಘಕ್ಕೆ ವಹಿಸಲು ಹಾಗೂ ಪಡಿತರ ವಿತರಣೆಯಲ್ಲಿ ಸರ್ಕಾರವು ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿಗೆ ದರವನ್ನು ಪಡೆಯದೇ ಇರುವಂತೆ ನೋಡಿಕೊಳ್ಳಲು ಸಹ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 21/1

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 21/1/17